## ಮಾತು-ಕತೆ

ನಮ್ಮ ಬುದ್ಧಿಜೀವಿ ವರ್ಗದ ಸಮಸ್ಯೆಯೆಂದರೆ, ಅದು ಯಾವಾಗಲೂ ಸಮುದಾಯದಿಂದ ದೂರ ಹೋಗುತ್ತದೆ.

- **ಸೂಫಿಗಳು ಜನರೊಟ್ಟಿಗೆ ಇದ್ದುಕೊಂಡೇ ಮೂಲಭೂತವಾದಿಗಳನ್ನು ಮುಖಾಮುಖಿ ಮಾಡಿದರು.**

ಹೌದು, ಇದಕ್ಕೆ ಕಾರಣ, ಅವರ ಆಧ್ಯಾತ್ಮಿಕ ಹುಡುಕಾಟ. ಅವರು ಆಚರಣಾವಾದಿಗಳಲ್ಲ. ಧರ್ಮದ ಗಡಿಗಳನ್ನು ಮೀರುವವರು. ಹಜರತ್ ನಿಜಾಮುದ್ದೀನರ ಬಳಿ ಒಬ್ಬ ಒಮ್ಮೆ ಕೇಳಿದ: "ನಾನು ಮುಸಲ್ಮಾನನಿದ್ದೇನೆ. ಆದರೆ ನನ್ನ ತಮ್ಮ ಮುಸ್ಲಿಂ ಆಗಿಲ್ಲ. ಅವನನ್ನು ಮುಸ್ಲಿಂ ಮಾಡಿರಿ." ಆಗ ಸಂತ ಹೇಳಿದರು: "ಈಗ ಇದರ ಅಗತ್ಯವಿಲ್ಲ. ಬೇರೆ ಧರ್ಮದ ಜನ ಮುಸ್ಲಿಂ ಆಗುವುದಕ್ಕೆ ಏನೆಲ್ಲ ಆಕರ್ಷಣೆಗಳಿದ್ದವೋ ಅವೆಲ್ಲ ಈಗ ಮುಗಿದುಹೋಗಿವೆ." ಇದರರ್ಥ ಜನರನ್ನು ಸೆಳೆಯಬಲ್ಲ ಪ್ರಗತಿಪರ ಆಲೋಚನೆಯ ಧರ್ಮವಾಗಿ ಇಸ್ಲಾಮಿನ ವೈಭವ ಮುಗಿದುಹೋಗಿದೆ, ಅದು ಜಡವಾಗಿದೆ ಎಂದರ್ಥ. ಹಿಂದು–ಮುಸ್ಲಿಂ ಭೇದಗಳನ್ನು ದಾಟಿ ಬಹಳ ಮೇಲಕ್ಕೆ ಏರಿಹೋಗಿದ್ದರು ಸೂಫಿಗಳು.

- **ಸೂಫಿಸರ್ಮದ್...**

ಆತನಂತೂ ಇಸ್ಲಾಮಿನ ಪವಿತ್ರ ಮಂತ್ರವಾದ ಕಲ್ಮದಲ್ಲಿ ('ಲಾ ಇಲಾಹಾ ಇಲ್ಲಲ್ಲಾಹ'=ದೇವರೊಬ್ಬನೇ, ಅವನು ಬಿಟ್ಟು ಬೇರೆ ದೇವರಿಲ್ಲ) ಮಾತ್ರ ಹೇಳುತ್ತಿದ್ದ. ಉಳಿದರ್ಧ (`ಮಹಮದರ್‌ರಸೂಲಲ್ಲ'=ಮಹಮದ್ ಅವನ ಪ್ರವಾದಿ) ಹೇಳುತ್ತಿರಲಿಲ್ಲ. ಮೊದಲರ್ಧದ ಅರ್ಥವೇ ಪೂರ್ಣವಾಗಿ ತಿಳಿಯಲು ಆಗಿಲ್ಲ. ಅದನ್ನು ತಿಳಿದ ಬಳಿಕ ಉಳಿದದ್ದನ್ನು ಹೇಳುವೆ ಎನ್ನುತ್ತಿದ್ದ.

ಸೂಫಿಗಳು ಸಂಗೀತವನ್ನು ಸಾಧನೆಗೆ ಬಳಸಿದರು. ಆದರೆ ಸಾಂಪ್ರದಾಯಿಕ ಇಸ್ಲಾಮಿನಲ್ಲಿ ಸಂಗೀತಕ್ಕೆ ನಿಷೇಧವಿದೆ.

- **ಪ್ರವಾದಿ ಮಹಮ್ಮದರು ಮಕ್ಕಾದಿಂದ ಮದೀನಾಕ್ಕೆ ಹೋದಾಗ ಅಲ್ಲಿನ ಮಹಿಳೆಯರು ಅವರನ್ನು ದಫ್ ವಾದ್ಯ ಬಾರಿಸಿ ಹಾಡುತ್ತ ಸ್ವಾಗತ ನೀಡಿದರು ಎಂದು ಚರಿತ್ರೆ ಹೇಳುತ್ತದೆ. ಮದ್ಯಪಾನ ಕೂಡ ಧಾರ್ಮಿಕವಾಗಿ ನಿಷಿದ್ಧ. ಆದರೆ ಅಫೀಮು ನಿಷೇಧಿತವಲ್ಲ. ಹುಕ್ಕಾ ಕುಡಿಯಬಹುದು. ನಶೆಯ ನಿಯಂತ್ರಣ ಮಾಡಬಲ್ಲಿರಾದರೆ ನಶೆ ನಿಷೇಧಿತವಲ್ಲ. ಯಾವುದೇ ವಸ್ತು ಅತಿಯಾದರೆ ಕೆಟ್ಟದ್ದು ತಾನೇ?**

ಸಂಗೀತಕ್ಕೂ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರುವ ಗುಣವಿದೆ. ಭಾರತದ ಸಂಗೀತದಲ್ಲಿ ನಿಜಾಮುದ್ದೀನರ ಶಿಷ್ಯ ಖುಸ್ರೂ ವಹಿಸಿದ ಪಾತ್ರ ಮಹತ್ವದ್ದು.

ಅಮೀರ್ ಖುಸ್ರೊ ಜೀವನದಲ್ಲಿ ಒಂದು ಘಟನೆ ಬರುತ್ತದೆ. ಆತ ತನ್ನ ಗೆಳೆಯರೊಟ್ಟಿಗೆ ಒಮ್ಮೆ ಎಲ್ಲೊ ಹೋಗುತ್ತಿದ್ದರು. ಹಿಂದುಗಳ ಗುಂಪೊಂದು ದೇವರ ಮೂರ್ತಿಯನ್ನು ಪ್ರತಿಷ್ಠಾಪನೆಗೆ ಮೆರವಣಿಗೆಯಲ್ಲಿ ಒಯ್ಯುವುದನ್ನು ಕಂಡದ್ದೇ ಕುದುರೆಯಿಂದ ಇಳಿದು ಗುಂಪಿನೊಂದಿಗೆ ಸೇರಿಕೊಂಡರು. ಅವರಂತೆ ಹಾಡಲು ಕುಣಿಯಲು ಆರಂಭಿಸಿದರು. ಅವರ ಗೆಳೆಯರು 'ನೀನು ಮುಸಲ್ಮಾನನಿದ್ದಿ. ಹಿಂದುಗಳ ಜತೆ ಹೇಗೆ ಸೇರಿಕೊಂಡೆ?' ಎಂದು ಕೇಳಿದಾಗ ಖುಸ್ರೊ ಹೇಳಿದರು: "ಅವರ ತೀವ್ರವಾದ ಭಾವನಾತ್ಮಕ ನಂಬಿಕೆ ಕಂಡೆ. ನನಗೆ ತಡೆಯಲು ಆಗಲಿಲ್ಲ."

- **ಧರ್ಮದ್ವೇಷ ಉಣ್ಣುತ್ತಿರುವ ಭಾರತ ಪಾಕಿಸ್ತಾನಗಳ ಸಮಾಜಕ್ಕೆ ಸೂಫಿಸಂನಲ್ಲಿ ಹೊರದಾರಿ ಇದೆಯಾ?**

ಖಂಡಿತಾ ಇದೆ. ಸೂಫಿಗಳ ಸಂದೇಶವನ್ನು ನಾವು ಜನರ ತನಕ ಮುಟ್ಟಿಸಬೇಕಿದೆ. ಧರ್ಮದ ನಿಜವಾದ ತಿರುಳಿನ ಮೇಲೆ ಒತ್ತು ಹಾಕಬೇಕಿದೆ. ನಿಮಗೆ ನಮಾಜು ಮಾಡುವವರು ಬಹಳ ಜನ ಸಿಗಬಹುದು. ಅವರಿಗೆ ಯಾಕೆ ನಮಾಜು ಮಾಡುತ್ತಿದ್ದೀರೆಂದು ಕೇಳಿ ನೋಡಿ. 'ದೇವರ ಇಬಾದತ್‌ಗೆ' ಎನ್ನುವರು.